ದಿನಾಂಕಃ 10.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ. ಎಸ್ ಎಸ್ ಎನ್ ವಕೀಲರಿಂದಃ**

ಮುದುಕಪ್ಪನ ತಂದೆಯ ಹೆಸರು ನಾಗಪ್ಪ. ಸದರಿ ನಾಗಪ್ಪನಿಗೆ ಒಟ್ಟು 06 ಜನ ಮಕ್ಕಳು. ಅವರೆಂದರೆ 1. ನೀಲವ್ವ, 2. ಅಪ್ಪೋಜಿ, 3. ಮುದುಕಪ್ಪ, 4. ಹನಮಂತ, 5. ಸುಶೀಲಾ ಹಾಗೂ ಭೀಮಶಿ. ಅಪ್ಪೋಜಿ ಮತ್ತು ಹನಮಂತ ಒಕ್ಕಲುತನವನ್ನು ಮಾಡುತ್ತಾರೆ. ಭೀಮಶಿ ಇತನು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾನೆ. ಮುದುಕಪ್ಪ ಅಂದರೆ ಪ್ರತಿವಾದಿ ಒಕ್ಕಲುತನ ಮಾಡುತ್ತಾನೆ.

ಪ್ರತಿವಾದಿ ಘಟಪ್ರಭಾ ಶುಗರ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನಿಜ. ಅವರು ಯಾವ ವರ್ಷದಲ್ಲಿ ಕಾರ್ಖಾನೆಗೆ ಕೆಲಸಕ್ಕೆ ಸೇರಿದ್ದರು ಎಂದು ನನಗೆ ಗೊತ್ತಿಲ್ಲ. ಯಾವ ವರ್ಷದಲ್ಲಿ ನಿವೃತ್ತಿ ಹೊಂದಿರುತ್ತಾರೆಂಬುದು ನನಗೆ ಗೊತ್ತಿಲ್ಲ.

ದಾವಾ ಆಸ್ತಿ ಸರ್ವೆ ನಂಬರ 116/1+4 ನೇದ್ದು ಮೂಲತಃ ನಿಂಗಪ್ಪ ಭರಮಪ್ಪ ಪೂಜೇರಿಯವರಿಗೆ ಸಂಬಂಧಿಸಿದ್ದು ಎಂದರೆ ನಿಜ. ಸದರಿ ಸರ್ವೆ ನಂಬರನಲ್ಲಿ ಒಟ್ಟು 03 ಎಕರೆ 21 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನನ್ನು ಪ್ರತಿವಾದಿ ಖರೀದಿಸಿರುತ್ತಾನೆಂದರೆ ಸಾಕ್ಷಿಯು ನಮ್ಮ ಅಜ್ಜ ನಾಗಪ್ಪ ಖರೀದಿಸಿರುತ್ತಾರೆಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ನಾಗಪ್ಪ ಸದರಿ ಆಸ್ತಿಯನ್ನು ಖರೀದಿಸಿರುತ್ತಾನೆಂದು ನನಗೆ ಗೊತ್ತಿಲ್ಲ. ಸದರಿ ಜಮೀನನ್ನು 1,30,000/- ರೂ.ಗಳಿಗೆ ಖರೀದಿಸಿರುತ್ತಾರೆ. ಸದರಿ ಜಮೀನನ್ನು ನಾಗಪ್ಪ ಖರೀದಿಸಿರುತ್ತಾನೆಂದು ತೋರಿಸಲು ಖರೀದಿ ಪತ್ರವನ್ನು ಹಾಜರುಪಡಿಸಿಲ್ಲ ಆದರೆ ಡೈರಿ ಉತಾರನ್ನು ಹಾಜರುಪಡಿಸಿರುತ್ತೇನೆ. ಡೈರಿ ನಂಬರನ್ನು ನನಗೆ ಹೇಳಲು ಆಗುವುದಿಲ್ಲ. ಸದರಿ ಡೈರಿಯು ಯಾವ ವರ್ಷದಲ್ಲಿ ಮಂಜೂರಾಗಿರುತ್ತದೆಂದು ಹೇಳಲು ಆಗುವುದಿಲ್ಲ. ಸದರಿ ನಾಗಪ್ಪನ ಹೆಸರಿಗೆ ಖರೀದಿ ಮಾಡಿ ಆತನ ಹೆಸರು

ದಾಖಲಾದ ಬಗ್ಗೆ ಪಹಣಿಪತ್ರಿಕೆಗಳನ್ನು ಹಾಜರುಪಡಿಸುತ್ತೀರಾ? ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ನಾಗಪ್ಪ ಯಾವ ಕಾಲಕ್ಕೂ ಖರೀದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಾಗಪ್ಪನ ಹೆಸರು ಕಂದಾಯ ದಾಖಲೆಗಳಲ್ಲಿ ಯಾವ ವರ್ಷದಲ್ಲಿ ಕಡಿಮೆಯಾಗಿರುತ್ತದೆಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಆದರೆ ಅವರು ತೀರಿಕೊಂಡ ನಂತರ ಆತನ ಮಕ್ಕಳು ತಮ್ಮ ಹೆಸರುಗಳನ್ನು ದಾಖಲಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ನಾಗಪ್ಪನ ಮಕ್ಕಳ ತಮ್ಮ ಹೆಸರಿಗೆ ಸದರಿ ಆಸ್ತಿಯನ್ನು ದಾಖಲಿಸಿಕೊಂಡಿರುತ್ತಾರೆಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಆ ಬಗ್ಗೆ ಡೈರಿಯನ್ನು ಹಾಜರುಪಡಿಸಿದ್ದೇನೆ ಆದರೆ ಅದರ ನಂಬರ ಹೇಳಲು ಆಗುವುದಿಲ್ಲ. ಸದರಿ ಡೈರಿ ಪ್ರಕಾರ ಪ್ರತಿವಾದಿಗೆ 01 ಎಕರೆ 07 ಗುಂಟೆ , ಭೀಮಶಿ ಮತ್ತು ಹನಮಂತನಿಗೆ ತಲಾ 01 ಎಕರೆ 07 ಗುಂಟೆ ಬಂದಿದ್ದು, ಅಪ್ಪೋಜಿಗೆ ಹಣವನ್ನು ಕೊಟ್ಟಿರುತ್ತಾರೆ. ಹನಮಂತ ಮತ್ತು ಭೀಮಶಿಯವರಿಗೆ ತಲಾ 01 ಎಕರೆ 07 ಗುಂಟೆ ಬಂದಿರುವ ಬಗ್ಗೆ ಪಹಣಿಪತ್ರಿಕೆಯನ್ನು ಹಾಜರುಪಡಿಸುತ್ತೇನೆ. ಸದರಿ ಸರ್ವೆ ನಂಬರನಲ್ಲಿಯ 03 ಎಕರೆ 38 ಗುಂಟೆ ಜಮೀನನ್ನು ಮುದುಕಪ್ಪ ಖರೀದಿಸಿದ್ದು ಆತನ ಹೆಸರಿಗೆ ದಾಖಲಾಗಿರುತ್ತದೆಂದರೆ ಸರಿಯಲ್ಲ. ಸದರಿ 03 ಎಕರೆ 38 ಗುಂಟೆ ಜಮೀನಿನ ಪೈಕಿ ಮುದುಕಪ್ಪನು ತನ್ನ ತಮ್ಮ ಭೀಮಪ್ಪನಿಗೆ 02 ಎಕರೆ 16 ಗುಂಟೆ ಜಮೀನನ್ನು ದಾನಪತ್ರದ ಮೂಲಕ ಬಿಟ್ಟುಕೊಟ್ಟಿರುತ್ತಾನೆಂದರೆ ಸಾಕ್ಷಿಯು ದಾನಪತ್ರ ಮಾಡಿಕೊಂಡಿರುತ್ತಾನೆಂದು ನುಡಿಯುತ್ತಾರೆ. ಸದರಿ ದಾನಪತ್ರದ ಮೇರೆಗೆ ಭೀಮಪ್ಪನ ಹೆಸರಿಗೆ 02 ಎಕರೆ 16 ಗುಂಟೆ ಜಮೀನು ದಾಖಲಾಗಿರುತ್ತದೆ ಎಂದರೆ ನಿಜ. ಉಳಿದ 01 ಎಕರೆ 07 ಗುಂಟೆ ಜಮೀನು ಮುದುಕಪ್ಪನ ಹೆಸರಿಗೆ ಉಳಿದಿರುತ್ತದೆಂದರೆ ನಿಜ. ಆದ್ದರಿಂದ ಸದರಿ 01 ಎಕರೆ 07 ಗುಂಟೆ ಜಮೀನು ಮುದುಕಪ್ಪ ಸ್ವಯಾರ್ಜಿತ ಆಸ್ತಿಯಾಗಿರುತ್ತದೆಂದರೆ ಸರಿಯಲ್ಲ. ಸದರಿ ಜಮೀನನ್ನು

ಮುದುಕಪ್ಪ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ತನ್ನ ಉಳಿತಾಯದ ಹಣದಿಂದ ಖರೀದಿಸಿರುತ್ತಾನೆಂದರೆ ಸರಿಯಲ್ಲ.

ಪ್ರತಿವಾದಿ ಮುದುಕಪ್ಪ ಪ್ರಸ್ತುತ ಪ್ರಕರಣದಲ್ಲಿ ಸಲ್ಲಿಸಿದ ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ಪ್ರತಿವಾದ ಪತ್ರದಲ್ಲಿ ಪ್ರತಿವಾದಿಯು ತಾನು ಸುಶೀಲಾ ಎಂಬುವಳನ್ನು ಮದುವೆಯಾಗಿದ್ದು, ಅವಳಿಂದ 03 ಮಕ್ಕಳನ್ನು ಪಡೆದಿರುವುದಾಗಿ ಬರೆಸಿರುತ್ತಾನೆಂದರೆ ನಿಜ. ಸಾಕ್ಷಿ ಮುಂದುವರೆದು ಸುಳ್ಳು ಹೇಳಿ ಬರೆಸಿರುತ್ತಾನೆಂದು ನುಡಿಯುತ್ತಾರೆ. ಸದರಿ ಸಂಗತಿ ಸುಳ್ಳು ಇರುತ್ತದೆಂದು ನಮ್ಮ ವಾದಪತ್ರವನ್ನು ತಿದ್ದುಪಡಿ ಮಾಡಿಕೊಂಡಿರುವುದಿಲ್ಲ. ಸದರಿ ಸುಶೀಲಾ ಇವಳಿಗೆ ಇನ್ನೂ 18 ವರ್ಷ ವಯಸ್ಸಾಗುವಷ್ಟರಲ್ಲಿ ಪ್ರತಿವಾದಿಯೊಂದಿಗೆ ಮದುವೆಯಾಗಿರುತ್ತೆಂದರೆ ನಿಜ.

2 ನೇ ವಾದಿಯು ಪ್ರತಿವಾದಿಯ ಕಾನೂನು ಬದ್ಧ ಹೆಂಡತಿ ಇದ್ದು, ನಾನು ಅವರ ಮಗ ಇರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ಮತ್ತು 2 ನೇ ವಾದಿಯ ಮದುವೆಯು ಬೆಟಗೇರಿ ಗ್ರಾಮದ ನಮ್ಮ ಅಜ್ಜ ನಾಗಪ್ಪನ ಮನೆಯ ಮುಂದೆ ನೇರವೇರಿರುತ್ತದೆ. ನಿಪಿ.15 ರಂತೆ ಹಾಜರುಪಡಿಸಿದ ವಿವಾಹ ಆಮಂತ್ರಣ ಪತ್ರಿಕೆಯಲ್ಲಿ ಬೆಟಗೇರಿಯ ವರನ ಸ್ವಗೃಹದಲ್ಲಿ ಮದುವೆ ನೆರವೇರಿರುವ ಬಗ್ಗೆ ಉಲ್ಲೇಖ ಇರುವುದಿಲ್ಲ ಎಂದರೆ ನಿಜ. 2 ನೇ ವಾದಿಯ ತವರು ಮನೆಯು ಸಹ ಬೆಟಗೇರಿ ಗ್ರಾಮ ಇರುತ್ತದೆ. 2 ನೇ ವಾದಿ ಮತ್ತು ಪ್ರತಿವಾದಿಯ ಮದುವೆ ಕಾಲಕ್ಕೆ ಯಾವೆಲ್ಲಾ ಕಾರ್ಯಕ್ರಮಗಳು ನಡೆದಿರುತ್ತವೆ ಎಂದು ನನಗೆ ಹೇಳಲು ಆಗುವುದಿಲ್ಲ.

2 ನೇ ವಾದಿಯು ಸನ್ 1988 ರಿಂದ ಇಲ್ಲಿಯವರೆಗೂ ಗಡಹಿಂಗ್ಲಜ ಗ್ರಾಮದಲ್ಲಿ ವಾಸವಾಗಿರುತ್ತಾರೆಂದರೆ ನಿಜ. 2 ನೇ ವಾದಿ ಹಾಗೂ ಪ್ರತಿವಾದಿಯ ಮದುವೆ ಯಾದಿಯನ್ನು ಹಾಜರುಪಡಿಸಲು ಆಗುವುದಿಲ್ಲ. ಅದೇ ರೀತಿ ಅವರ

ಮದುವೆಯಲ್ಲಿ ತೆಗೆದ ಭಾವಚಿತ್ರಗಳನ್ನು ಹಾಜರುಪಡಿಸಲು ಆಗುವುದಿಲ್ಲ. ನಿಪಿ.15 ನೇದ್ದನ್ನು ಖೊಟ್ಟಿಯಾಗಿ ಸೃಷ್ಟಿಸಿಕೊಂಡು ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ನಿಪಿ.15 ನೇದ್ದನ್ನು ಎಲ್ಲಿ ಮುದ್ರಣ ಮಾಡಿಸಿರುತ್ತಾರೆಂದು ನನಗೆ ಹೇಳಲು ಆಗುವುದಿಲ್ಲ. ಸನ್ 1988 ರಿಂದ ಇಲ್ಲಿಯ ತನಕ 2 ನೇ ವಾದಿ ಗಡಹಿಂಗ್ಲಜ ಗ್ರಾಮದಲ್ಲಿ ಮತದಾನ ಮಾಡುತ್ತಾ ಬಂದಿರುತ್ತಾರೆಂದರೆ ಸರಿಯಲ್ಲ. ವಾದಪತ್ರದಲ್ಲಾಗಲೀ ಅಥವಾ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿಯಾಗಲೀ ಗೋಕಾಕ ಪಟ್ಟಣದ ಯಾವ ನಗರ ಅಥವಾ ಓಣಿಯಲ್ಲಿ ವಾಸವಾಗಿರುತ್ತೇವೆ ಎಂದು ಹೇಳಿ ಬರೆಸಿರುವುದಿಲ್ಲ ಎಂದರೆ ನಿಜ. ನಿಪಿ.7 ರಂತೆ ಹಾಜರುಪಡಿಸಿದ ಡೈರಿ ನಂಬರ 1654 ರಲ್ಲಿ ಸರ್ವೆ ನಂಬರ 118/1 ನೇದ್ದು ಮೂಲತಃ ಬಾಗವ್ವಾ ಕೋಂ. ಅಪ್ಪೊಜಿಪ್ಪ ಮಾಕಾಳಿ ಇವರ ಹೆಸರಿಗೆ ದಾಖಲು ಇತ್ತು ಎಂದರೆ ನಿಜ. ಸದರಿ ಬಾಗವ್ವಾ ಇವರು ಸನ್ 1967 ರಲ್ಲಿ ಮೈತರಾಗಿರುತ್ತಾರೆಂದರೆ ನಿಜ. ಸದರೀಯವರಿಗೆ ಮಕ್ಕಳು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಬಾಗವ್ವಳಿಗೆ ಮಕ್ಕಳು ಇರದೇ ಇರುವ ಕಾರಣ ಬಾಗವ್ವಳ ಅಣ್ಣನ ಮಗನಾದ ನಾಗಪ್ಪ ಮುದುಕಪ್ಪ ಮಾಕಾಳಿರವರ ಹೆಸರಿಗೆ ಸದರಿ ಆಸ್ತಿಯು ದಾಖಲಾಗಿರುತ್ತದೆಂದರೆ ನಿಜ. ಆದ್ದರಿಂದ ಸದರಿ ಆಸ್ತಿಯು ನಾಗಪ್ಪನಿಗೆ ಹಿರಿಯರಿಂದ ಬಂದ ಆಸ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.14 ರಂತೆ ಹಾಜರುಪಡಿಸಿದ 2ನೇ ವಾದಿಯ ಆಧಾರ ಕಾರ್ಡನ್ನು ದಿ.08.11.2016 ರಂದು ನೀಡಿರುತ್ತಾರೆಂದರೆ ನಿಜ. ನಿಪಿ.14 ನ್ನು ಪಡೆಯುವ ಕಾಲಕ್ಕೆ ಶಾಲಾ ವರ್ಗಾವಣಾ ಪ್ರಮಾಣಪತ್ರವನ್ನು ಹಾಜುಪಡಿಸಿರುತ್ತೇವೆ. ಶಾಲಾ ವರ್ಗಾವಣಾ ಪ್ರಮಾಣಪತ್ರದಲ್ಲಿ 2 ನೇ ವಾದಿಯ ಹೆಸರು, ಅವಳ ತಂದೆಯ ಹೆಸರು ಹಾಗೂ ಅವಳ ತವರು ಮನೆಯ ಅಡ್ಡಹೆಸರು ಇರುತ್ತದೆಂದರೆ ನಿಜ. ನಾವು ಕೊಟ್ಟ ಮಾಹಿತಿಯ ಆಧಾರದ ಮೇರೆಗೆ ಆಧಾರ ಕಾರ್ಡನ್ನು ವಿತರಣೆ

ಮಾಡುತ್ತಾರೆಂದರೆ ನಿಜ. ನಿಪಿ.16 ರಂತೆ ಹಾಜರುಪಡಿಸಿದ ಪ್ರಮಾಣಪತ್ರವನ್ನು ಉದ್ಯೋಗಕ್ಕಾಗಿ ನೀಡಲಾಗಿರುತ್ತದೆಂದರೆ ನಿಜ. ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಸುಶೀಲಾ ಮತ್ತು ಅವರ ಮಕ್ಕಳನ್ನು ಸಹ ಪ್ರಸ್ತುತ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರಿಸುವುದು ಅವಶ್ಯಕವಾಗಿರುತ್ತದೆ ಎಂಬುದನ್ನು ನಮ್ಮ ವಕೀಲರನ್ನು ಕೇಳಿ ತಿಳಿದುಕೊಂಡಿರುತ್ತೇನೆ. ಸನ್ 2025 ರಲ್ಲಿ 2 ನೇ ವಾದಿಯು ಗಡಹಿಂಗ್ಲಜ ನ್ಯಾಯಾಲಯದಲ್ಲಿ ಪ್ರತಿವಾದಿಯ ವಿರುದ್ಧ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದ ಬಗ್ಗೆ ಅದರ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ನಾನು ನಿಪಿ.1 ರಿಂದ ನಿಪಿ.16 ರಂತೆ ಹಾಜರುಪಡಿಸಿದ ದಾಖಲೆಗಳಲ್ಲಿ ಸದರಿ ದಾಖಲೆ ಇರುವುದಿಲ್ಲ ಎಂದರೆ ನಿಜ.

2 ನೇ ವಾದಿಯ ಪರವಾಗಿ ಸಾಕ್ಷ್ಯ ನುಡಿಯಲು ನಾನು ಅವರಿಂದ ಅಧಿಕಾರ ಪತ್ರವನ್ನು ಪಡೆದಿರುವುದಿಲ್ಲ. ಪ್ರತಿವಾದಿಗೆ ದುಶ್ಚಟಗಳು ಇದ್ದವು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಿ.16.10.2025 ರಂದು ಹಿರಿಯರ ಮೂಲಕ ಪ್ರತಿವಾದಿಯನ್ನು ಸಂಪರ್ಕಿಸಿ ಪಾಲು ಕೊಡುವಂತೆ ಕೇಳಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗಾಗಲೀ,2 ನೇ ವಾದಿಗಾಗಲೀ ಯಾವುದೇ ರೀತಿ ಹಕ್ಕು ಅಥವಾ ಪಾಲು ಇರದೇ ಇರುವ ಬಗ್ಗೆ ಗೊತ್ತಿದ್ದರೂ ಸಹ ಪ್ರತಿವಾದಿಗೆ ಹಾಗೂ ಆತನ ಹೆಂಡತಿ, ಮಕ್ಕಳಿಗೆ ತೊಂದರೆ ಕೊಡುವ ಉದ್ದೇಶದಿಂದ ಖೊಟ್ಟಿ ದಾವೆಯನ್ನು ಸಲ್ಲಿಸಿ, ಆ ದಿಶೆಯಲ್ಲಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿದ್ದು, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>**ಮರುವಿಚಾರಣೆಃ**</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ